

ಆರಿಫ್ ರಾಜಾ

# ಕವಿತೆ ಜೋರಾಗಿ ಘೋಷಣೆ ಕೂಗುತ್ತಾ ಬರೋದಿಲ್ಲ

ಕವಯಿತ್ರಿ, ಉಪನ್ಯಾಸಕಿ
**ಶಾಕಿರಾ ಪರ್ವೀನ್**
ದೇಶ: **ಬಾಂಗ್ಲಾ**

ಶಾಕಿರಾ ಪರ್ವೀನ್ ಬಾಂಗ್ಲಾ ದೇಶದ ಹೊಸ ತಲೆಮಾರಿನ ಪ್ರಮುಖ ಕವಯಿತ್ರಿ. ಸಾತ್ಖಿರ ಜಿಲ್ಲೆಯ ಶ್ಯಾಮ್ ನಗರದಲ್ಲಿ 1977ರ ಜುಲೈ 6ರಂದು ಜನಿಸಿದರು. ಈಗಾಗಲೇ ಇವರ 19 ಕವನ ಸಂಕಲನಗಳು ಬೆಳಕು ಕಂಡಿವೆ. ಪ್ರಸ್ತುತ ಢಾಕಾನಗರದಲ್ಲಿ ವಾಸ. ಸಿನಿಮಾ ಹಾಗೂ ಪತ್ರಿಕೋದ್ಯಮ ಸಮೂಹ ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೃಶ್ಯ ಮಾಧ್ಯಮದ ಬಗ್ಗೆ ವಿಶೇಷ ಒಲವು ಇರುವ ಶಾಕಿರಾ ಕಿರುತೆರೆಗಾಗಿ ಅನೇಕ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದ್ದಾರೆ. 2015ರಲ್ಲಿ ಢಾಕಾದಲ್ಲಿ ನಡೆದ ಸಾರ್ಕ್ ಸಮ್ಮೇಳನದಲ್ಲಿ ಕವಿಯಾಗಿ ಹಾಗೂ 2019ರಲ್ಲಿ ಸ್ವೀಡನ್ನಿನ ಗೋಥೆನ್‌ಬರ್ಗ್‌ನಲ್ಲಿ ಜರುಗಿದ ಅಂತರರಾಷ್ಟ್ರೀಯ ಪುಸ್ತಕ ಮೇಳದಲ್ಲಿ ಅತಿಥಿಯಾಗಿ ಭಾಗವಹಿಸಿದ್ದಾರೆ.

